**<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ಹುಕ್ಕೇರಿ</u>**

CC No. 2152 /2024
CW- 7 / PW- 4

ಹೆಸರು : ವಿನಾಯಕ ಬೀಮಪ್ಪ ಸಜಲಿ
ವಯಸ್ಸು : 16 ವರ್ಷ
ಉದ್ಯೋಗ : ವಿದ್ಯಾರ್ಥಿ
ವಾಸಸ್ಥಳ : ಚಿಲಭಾವಿ, ತಾಃ ಹುಕ್ಕೇರಿ

(ದಿನಾಂಕ 05.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಂದುವರೆದ ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರು ಗೈರು ಹಾಜರಾಗಿದು ಸಾಕ್ಷಿ ಸ್ವತಃ ತಾನೇ ಬಂದಿರುವುದರಿಂದ ಆತನ ಸಾಕ್ಷಿ ವಿಚಾರಣೆಯನ್ನು ತೆಗೆದುಕೊಳ್ಳಲಾಯಿತು.</u>**

1. ಲಾರಿಯಲ್ಲಿ ಶೆಟ್ಟೆಪ್ಪ ಬಂದ. ಲಕ್ಕಪ್ಪ, ಸಾಗರ್ , ಬಾಳೇಶ, ಚೇತನ್ ಇವರು ಶಾಂತಪ್ಪನ ಅಂಗಡಿ ಹತ್ತಿರ ಇದ್ದರು. ಶೆಟ್ಟೆಪ್ಪ ನನ್ನ ಅಣ್ಣನಿಗೆ ರಾಡ್ ನಿಂದ ಬಡಿದ, ಉಳಿದ ಎಲ್ಲರೂ ಬಂದು ನನ್ನ ಅಣ್ಣನಿಗೆ ಬಡಿದರು. ಬಾಳಪ್ಪ ರಾಡ್ ನಿಂದ ಬಡಿದ, ಸಾಗರ್ ನನ್ನ ಅಣ್ಣನ ಎರಡೂ ಕೈ ಹಿಂದೆ ಕಟ್ಟಿ ಗಟ್ಟಿಯಾಗಿ ಹಿಡಿದಿದ್ದ. ಲಕ್ಕಪ್ಪ ಬಡಿಗೆಯಿಂದ, ನನ್ನ ಅಣ್ಣನ ಬಲಗೈಗೆ ಹೊಡೆದನು. ಚೇತನ ಕಲ್ಲಿನಿಂದ ನನ್ನ ಅಣ್ಣನ ಎಡಗಣ್ಣಿಗೆ ಹೊಡೆದ. ನಾನು ಅದನ್ನು ನೋಡಿ ನಮ್ಮ ತಾಯಿಯನ್ನು ಕರೆಯಲು ಮನೆಗೆ ಓಡಿಹೋದೆ. ಆ ಅಂಗಡಿಯಿಂದ ನಮ್ಮ ಮನೆ 100 ಮೀಟರ್ ದೂರದಲ್ಲಿತ್ತು, ನಾನು ತಕ್ಷಣ ಅಲ್ಲಿಗೆ ಓಡಿಹೋದೆ. ನನ್ನ ತಾಯಿ ಬಿಡಿಸಲು ಬಂದಳು, ನನ್ನ ತಾಯಿಯ ಜಂಪರ್ ಹಿಡಿದು ಬಾಳಪ್ಪ ಬಿಸಾಕಿದ. ಅವರೆಲ್ಲರೂ ನಮ್ಮ ಅಣ್ಣನ್ನು ಅಲ್ಲೇ ಬಿಟ್ಟು ಹೋದರು. ನನ್ನ ತಾಯಿ ನಮ್ಮ ಮಗನನ್ನು ಏಕೆ ಬಡಿಯುತ್ತಿದ್ದೀರಿ ಎಂದು ಬಿಡಿಸಲು ಬಂದಾಗ, ಬಾಳಪ್ಪ ನನ್ನ ತಾಯಿಗೆ ಕೈಹಿಡಿದು ದೂಗಿಸಿದ. ನಮ್ಮ ಅವ್ವ ಚೀರಾಡಲು ಹತ್ತಿದರು. ಅವರು ಬಿಟ್ಟು ಓಡಿಹೋದರು. ನಂತರ ನಾವು ನಮ್ಮ ಅಣ್ಣನ್ನು ಕರೆದುಕೊಂಡು ಮನೆಗೆ ಹೋದೆವು. ನನ್ನ ಅಣ್ಣನ ಕಣ್ಣಿನ ಹತ್ತಿರ ರಕ್ತ ಬರುತ್ತಿತ್ತು. ಆಂಬುಲೆನ್ಸ ಗೆ ಪೋನ್ ಮಾಡಿ ಬೆಳಗಾವಿಯ ವಿಜಯಾ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಾವು ಚಿಕಿತ್ಸೆ ಪಡೆಯುತ್ತಿದ್ದರಿಂದ 2 ದಿನ ಬಿಟ್ಟು ನಾವು ಕಂಪ್ಲೆಂಟ್

ಕೊಟ್ಟೆವು. 2 ದಿನ ಬಿಟ್ಟು ಪೊಲೀಸರು ಪಂಚನಾಮೆ ಮಾಡಲು ಘಟನಾ ಸ್ಥಳಕ್ಕೆ ಬಂದರು.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಎಂ ವಕೀಲರು ಸಮಯ ಕೇಳಿದ್ದು 500/- ರೂ. ಖರ್ಚಿನೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

Sd/-
(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ